ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಆಸ್ತಿವಾಸ್ತುಗಳಲ್ಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1889ನೇ ಇಸವಿ ಫಿಬ್ರವರಿ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತನಿನು ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಹೇದಾರ್ರು ಅಥವಾ ದಾವೇದಾರ್ರ ಹೆಸರು ಮತ್ತು ವಿವರ ಮತ್ತು ಥಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಮಲಗ.	ದೇಣಿಗೆ ಯಾವಾಗ ದೇಣಿಯಾಗಿ ಕೊಡಲ್ಪಟ್ಟಿದೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಸ್ಯ.
1	ಮೈಸೂರು ಟರ್ನ ಬ್ಯಾಂಕ ಯೇಜಂಟ್ ರಾಮರಾವು	72 3 6		ಡಿಕ್ರಿ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 25ನೇ ಜನವರಿ 1889.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟು ನಗರವ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿರುವ ಹೈದರ್‌ಖೇರ್, ಲಕ್ಷ್ಮೀಪುರ ಮತ್ತು ಆಗುಂಬೆ ಘಾಟಿಗಳಲ್ಲಿನ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟೆಯಲ್ಲಿ 1889ನೇ ಇಸವಿ ಏಪ್ರಿಲ್ 1ನೇ ಮುಕ್ತುಂ ಲಾಗಾಯತು 1890ನೇ ಇಸವಿ ಮಾರ್ಚಿ 31ರವರಿಗೆ ಟೋಲ್ ಯಾನೆ ಸುಂಕವನ್ನು ವಸೂಲ್‌ಮಾಡುವ ಸ್ವಾತಂತ್ರ್ಯವನ್ನು ಬೇರೇಬೇರೆಯಾಗಿ ಅಂದರೆ 1889ನೇ ಇಸವಿ ಫಿಬ್ರವರಿ 18ನೇ ಮುಕ್ತುಮಿನಲ್ಲಿ ನಗರ ತಾಲ್ಲೂಕು ಅಮಲ್‌ದಾರರಿಂದ ನಗರದ ಮೊಕ್ತಾಮಿನಲ್ಲೂ, ಅದೇ ಇಸವಿ ಫಿಬ್ರವರಿ 25ನೇ ಮುಕ್ತುಮಿನಲ್ಲಿ ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರರಿಂದ ತೀರ್ಥಹಳ್ಳಿ ಮೊಕ್ತಾಮಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ವಸೂಲೀ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಜಾಸ್ತಿದರ ವಸೂಲ್ಮಾಡಕೂಡದು, ಸ್ಯ 1876ನೇ ಇಸವಿ ನವೆಂಬರ್ 4ನೇ ಮುಕ್ತುಂ 276ನೇ ನಂಬರ್‌ವುಳ್ಳ ಲೇಟೆ ಜೀಳ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿಷ್ ಆಗಿ ಇಗಿರುವ ರೂಲ್ಸ ಪ್ರಕಾರ ನಡದುಕೊಳ್ಳಬೇಕು. ಸರ್ಕಾರದ ಸ್ವತ್ತು ಮತ್ತು ಸರ್ಕಾರದ ಕೆಲಸದ ಮೇಲೆ ಸಂಚರಿಸುವ ಸರ್ಕಾರ ಉದ್ಯೋಗಸ್ಥರು ಸುಂಕದ ದೆಕೆಯಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿಕಮ್ಮಿಷನರವರು ಅಧಿಕಾರ ಪಡೆದಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ಆರರಲ್ಲಿ ಒಂದು ಭಾಗದ ಮೊಬಲಗನ್ನ ಅಡ್ವಾನ್ಸಾಗಿ ಠೇವಣಿ ಯಿಟ್ಟು ಬಾಕೀ ಮೊಬಲಗನ್ನ ಸ್ಯ 1889ನೇ ಇಸವಿ ಏಪ್ರಿಲ್ 20ರ ಲಾಗಾಯತು ಸಮನಾದ, 10 ಮಾಹೆವಾರಿ ಖಿಸ್ತುಗಳಾಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪಾವತೀ ಮಾಡಬೇಕು. ದಿವಾಜಿಪೆ ಮೊಬಲಗು 11—12ನೇ ಮಾಜೆ ಖಿಸ್ತುಗಳಿಗೆ ಉಪಯೋಗಿಸಲ್ಪಡುವದು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ವಲ್ಜನನ್ನ ಜಾಮೀನು ಕೊಡಬೇಕು.

5. ಠೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ನುಕ್ಸಾನುಕರವಾಗಿ ಕಂಟ್ರಾಕ್ಟು ಎರಡನೇ ಹರಾಜ್ ಮಾಡಲ್ಪಡುವದು ಖಿಸ್ತು ಪ್ರಕಾರ ಪಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತೀ ತಾರೀಖಿನ ವರಗೆ ತಿಂಗಳು ಬಂದಕ್ಕೆ ರೂಪಾಯಿ ಬಂದಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು ಮತ್ತು ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವ ಪ್ರಕಾರ ಜಾಮೀನ್‌ದಾರನ ಅಪೇಕ್ಷೆ ಮೇಲೆ ಕಂಟ್ರಾಕ್ಟು ಎರಡನೇ ಹರಾಜ್ ಮಾಡಲ್ಪಡುವದಕ್ಕೆ ಗರಿಯಾಗತಕ್ಕದ್ದು, ಅದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನ್‌ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಕಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಪ್ರಕಾರ ಕಂತ್ಯಕ್ಕೆ ಒಳಪಟ್ಟು ಖಜಾನೆಗೆ ಕಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಇರುತ್ತಾನೆ.

7. ಪ್ರತಿ ದಿನದ ವಸೂಲಿ ತೋರಿಸುವ ಲಿಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್‌ಸ್ಪೆಕ್ಷನಿಗೆ ಸದರೀ ಲಿಖ್ಖ ವಳಗಾಗಿ ಇರತಕ್ಕದ್ದು.

8. ಘಾಟಿಯ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

ದರಗಳ ಷೆಡ್ಯೂಲ್ ಪಟ್ಟಿ.

		ರೂ.	ಅ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಪ್ರತಿ ಎರಡು ಡಿಟೊ	1	0	0
3.	ಪ್ರತಿ ಯಕ್ಕಾ ಮೇಲೂ	0	4	0
4.	ಸ್ಪ್ರಿಂಗ್‌ಯಾನೇ ಬಿಲ್ಲಿನ ಹೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ	0	2	0
5.	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಎಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿ ಇದ್ದರೆ	1	8	0
6.	ಡಿಟೋ ಡಿಟೋ ಭರ್ತಿಯಿಲ್ಲದಿದ್ದರೆ	0	8	0
7.	ಆರುಯತ್ತುಗಳು ವಗೈರೇಗಳಿಂದ ಯಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿದ್ದರೆ.	0	12	0
8.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	6	0
9.	ನಾಲ್ಕು ಯತ್ತು ವಗೈರೇಗಳಿಂದ ಯಳೆಯಲ್ಪಟ್ಟಗಾಡಿ ಮತ್ತು ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿ ಯಿದ್ದರೆ	0	8	0
10.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	4	0
11.	ಯರಡು ಯತ್ತು ವಗೈರೇಗಳಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ ಬಂದಕ್ಕೆ ಭರ್ತಿಯಾಗಿ ಇದ್ದರೆ	0	4	0
12.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	2	0
13.	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಯಿದ್ದರೆ. ..	0	1	0
14.	ಡಿಟೋ ಡಿಟೋ ಹೊರೆ ಯಿಲ್ಲದಿದ್ದರೆ	0	0	3
15.	ಪ್ರತಿ ಆನೆಗೂ	1	8	0
16.	ಪ್ರತಿ ವಂಟಿಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17.	ಡಿಟೋ ಡಿಟೋ ಹೊರೆ ಯಿಲ್ಲದಿದ್ದರೆ	0	4	0
18.	ಡಿಟೋ ಕುದರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರೀ ಮಾಡಲ್ಪಡುತ್ತಿದ್ದರೆ ..	0	1	6
19.	ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದರೆಗೂ	0	0	9
20.	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ	0	0	9
21.	ಡಿಟೋ ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22.	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟು ಯಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ ..	0	0	6
23.	ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ ..	0	0	1
24.	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25.	ಯಿಂಟು ಜೋಯಿಗಳೊಡನೆ ಪ್ರತಿ ಪೋಲಿ, ಪಾಲಕಿ ಯಾ ಟಾಂಜಾನಿಗೂ ..	1	0	0
26.	ಆರು ಜೋಯಿಗಳೊಡನೆ ಡಿಟೋ	0	12	0
27.	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28.	ಯಿಬ್ಬರು ಜೋಯಿಗಳೊಡನೆ ಡಿಟೋ ಡಿಟೋ	0	4	0

ಪರಂ—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ವಿ. ಪಿ. ಮಾಧವರಾವ್,
ಡೆಪ್ಯುಟಿ ಕಮ್ಮಿಷನರ್.

ಗವರ್ನಮೆಂಟ್ ತಯಾರೀ ಬಾಖಿತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪಾರ್ಟಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟೀವ್ ಮರ್ಚಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲು, ಬಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.